1456 (1813) ಶ್ರೀ ಜಯಪ್ರಕಾಶ್ ಹೆಗ್ಡೆ. ಕೆ. (ಬ್ರಹ್ಮಾವರ) :– ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ 2 ನೇ ಹಂತದಲ್ಲಿ ಕೈಗೊಳ್ಳಲಾಗುತ್ತಿರುವ ಕಾಮಗಾರಿಗಳೆಷ್ಟು; (ವಿಧಾನ ಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು);

ಆ) ಇದಕ್ಕಾಗಿ ಒದಗಿಸಲಾದ ಅನುದಾನವೆಷ್ಟು; (ವಿಧಾನಸಭಾ ಕ್ಷೇತ್ರವಾರು ವಿವರವನ್ನು ಒದಗಿಸುವುದು);

ಶ್ರೀ ಹೆಚ್.ಡಿ ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು):

ಅ) ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ–2 ರಡಿಯಲ್ಲಿ 3411 ಕಿ.ಮೀ. ಉದ್ದದ 38 ರಾಜ್ಯ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿದ ರಾಜ್ಯ ಹೆದ್ದಾರಿಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ವಿವರವಾದ ಯೋಜನಾ ವರದಿಯು ಒಂದು ಹಂತಕ್ಕೆ ತಯಾರಾದ ಒಡನೆಯೇ ರಾಜ್ಯ ಸರ್ಕಾರವು ಅಂತರ ರಾಷ್ಟ್ರೀಯ/ ರಾಷ್ಟ್ರೀಯ ಹಣಕಾಸು ಸಂಸ್ಥೆಗಳೊಡನೆ ಸಂಪರ್ಕಿಸಿ ಸಾಲದ ಗಾತ್ರ ಮತ್ತು ಒಪ್ಪಂದಗಳನ್ನು ಮಾಡಿಕೊಳ್ಳಬೇಕಾಗಿರುತ್ತದೆ. ಈ ಸಾಲದ ಗಾತ್ರ ಮತ್ತು ಒಪ್ಪಂದ ಆಗದ ಹೊರತು ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ –2 ರಡಿಯಲ್ಲಿ ಎಷ್ಟು ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುವುದೆಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿರುವುದಿಲ್ಲ. ಆದ್ದರಿಂದ ಈ ಹಂತದಲ್ಲಿ ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ –2 ರಡಿಯಲ್ಲಿ ಕೈಗೊಳ್ಳಲಾಗುವ ಕಾಮಗಾರಿಗಳ ವಿಧಾನ ಸಭಾ ಕ್ಷೇತ್ರವಾರು ವಿವರಗಳನ್ನು ತಿಳಿಸಲು ಕಷ್ಟಸಾಧ್ಯ.

ಆ) ಯೋಜನಾ ವರದಿಯು ತಯಾರಿಕೆಯ ಹಂತದಲ್ಲಿರುವುದರಿಂದ ಸದ್ಯಕ್ಕೆ ಅನುದಾನ ಪ್ರಶ್ನೆಯು ಉದ್ಭವಿಸುವುದಿಲ್ಲ.

Annexure - 1

Enclosure to GO No PWD. 61 EAP 2006 Bangalore Dated : 25-11-2006

List of Selected roads for improvements under KSHIP -II

Sl. No	Name of the roads	Length (Kms)
01	Tinthni - Devadurga - Kalmala	74
02	Kushtagi (NH-13)- Tawargera - Sindhnur	64
03	Managoli - Talikota - Devapur	110
04	Mudgal - Kudithini (NH - 63)	115
05	Konananur - Hunsur - HD Kote	89
06	Sira - AP Border via Madhugiri - Gowribidanur - Chikballapur - Chintamani - Srinivasapura- Mulbagal	210
07	Hallyal - Kudalasangama via Dharwad - Soudatti - Ramdurga - Badami - Pattadkal - Kamatgi - NH13	243
08	Hassan - Periyapatna via Arakalagud - Ramanathpura	77
09	Hirekerur - Ranebennur (on NH-4)	58
10	Kudachi - Kabbur - Ghataprabha	50
11	Shikaripura - Anandapuram (on NH-206)	32
12	Kotumachigi - Gajendragarh	32
13	Goa Border - Soudatti via Khanapur - Bagewadi - Bailhongal	133

14	Mudhol - Nippani via Mahalingapur - Kabbur	104
15	Belur - Kodhpet via Bikkodu - Vatehole - Alur - Magge	72
16	Davanagere - Birur via Channagiri	104
17	Gangamula - Kottigehara	63
18	Hangal - Haveri (NH-4)	32
19	TN Border (Hunasanahalli) - AP Border via Kanakapura - Ramanagara - Magadi - Dobbespet - Koratagere - Madhugiri - Pavagada	220
20	Hole Narasipura to K.R.Nagar via Saligarama	46
21	Shelavadi - Harapanahalli via Gadag - Mundarigi	112
22	Indi - Zalaki (on NH-13)	20
23	Maharastra Border - Gulbarga via Afzalpur	99
24	Hungund - Talikot via Muddebihal	58
25	Gubbi - Mandya via Yediyur - Kowdle	109
26	Jagalur - NH-13	10
27	Hoskote - AP Border via Chintamani	88
28	Belthangadi to Bantwal (on NH 48)	35
29	Ramanagaram - Saligrama via Thalavadi - Choulanakuppe - Huliyadurga - Nagamangala - K.R.Pet Akkihebbal - Berya	142
30	Malavalli - Koratagere via Maddur - Kunigal - Tumkur	135
31	Shimoga - Tadasa on NH-4 via Savalanga via Shikaripura - Shiralakoppa - Togarsi - Anvatti-	171

	Gondi - Hangal	
32	Jamkhandi - Maharastra Border via Teradal - Kudachi - Mangasuli	79
33	Horanadu - Subramanya via Kalasa - Kottigehara Mudigere - Sakaleshpura Junction - Vanagur	164
34	Molkalmur to SH 19 (KSHIP 1 Road)	6
35	Bidar - Chincholi via Ekhelli (NH9)	61
36	Padubidri - Karkala	28
37	Kollegala - Tamilnadu Border via Hanur MM Hills	97
38	Virajpet - Somawarpet via Madikere	71
	Total Length (Kms)	**3,411**

1458 (1815) ಶ್ರೀ ಜಯಪ್ರಕಾಶ್ ಹೆಗ್ಡೆ. ಕೆ. (ಬ್ರಹ್ಮಾವರ) :– ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ರಸ್ತೆ ನಿಧಿ ಯೋಜನೆಯಡಿ ಕೈಗೊಳ್ಳಲಾಗುತ್ತಿರುವ ಕಾಮಗಾರಿಗಳೆಷ್ಟು; (ವಿಧಾನ ಸಭಾ ಕ್ಷೇತ್ರವಾರು ವಿವರವನ್ನು ಒದಗಿಸುವುದು);

ಆ) ಇದಕ್ಕಾಗಿ ಒದಗಿಸಲಾಗಿರುವ ಅನುದಾನವೆಷ್ಟು; ಜಿಲ್ಲಾವಾರು ವಿವರವನ್ನು ಒದಗಿಸುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ವಿವರಗಳನ್ನು ಅನುಬಂಧ – 1 ರಲ್ಲಿ ನೀಡಿದೆ.

ಆ) ವಿವರಗಳನ್ನು ಅನುಬಂಧ – 1 ರಲ್ಲಿ ನೀಡಿದೆ.